aglasem.com

FOR KARNATAKA CLASS 11 PREPARATION

Karnataka 1st PUC Model Question Paper 2027 for Political Science (Paper 1, Kannada Medium)

EXAM	YEAR	TYPE	SUBJECT
Karnataka Class 11	2027	Sample Paper	Political Science

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

ಪ್ರಥಮ ಪಿ.ಯು.ಸಿ ರಾಜ್ಯಶಾಸ್ತ್ರ (29) ಮಾದರಿ ಪ್ರಶ್ನೆ ಪತ್ರಿಕೆ–1 : 2026–27

(Kannada version)

ಸಮಯ: 3 ಗಂಟೆ **ಗರಿಷ್ಟ ಅಂಕಗಳು: 80**

ಸೂಚನೆಗಳು

1. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ
2. ಬಲಬದಿಯಲ್ಲಿ ಅಂಕಗಳನ್ನು ಸೂಚಿಸಲಾಗಿದೆ
3. ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆದು ಅವುಗಳ ಉತ್ತರಗಳನ್ನು ಬರೆಯಿರಿ
4. ಭಾಗ – ಎ ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು

ಭಾಗ – ಎ

I. ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ: **5x1=5**

1. ರಾಜ್ಯಶಾಸ್ತ್ರವನ್ನು ಮೊಟ್ಟಮೊದಲಿಗೆ ವೈಜ್ಞಾನಿಕವಾಗಿ ಯಾರು ಅಧ್ಯಯನ ಮಾಡಿದರು?

   ಎ) ಸಾಕ್ರೆಟೀಸ್ ಬಿ) ಪ್ಲೇಟೋ

   ಸಿ) ಅರಿಸ್ಟಾಟಲ್ ಡಿ) ಮೆಕೇವೆಲ್ಲಿ

2. ಸಪ್ತಾಂಗ ಸಿದ್ಧಾಂತದ ಪ್ರತಿಪಾಧಕರು

   ಎ) ಪ್ಲೇಟೋ ಬಿ) ಅರಿಸ್ಟಾಟಲ್

   ಸಿ) ಸ್ಯಾಕ್ರಟೀಸ್ ಡಿ) ಕೌಟಿಲ್ಯ

3. ಪರಮಾಧಿಕಾರದ ಮೂಲ ಪದ

   i) ಲಿಬರ್ ii) ಲ್ಯಾಗ್

   iii) ಫೇಡಸ್ iv) ಸೂಪರಾನಸ್/

   ಎ) (iv) ಬಿ) (ii)

   ಸಿ) (iii) ಡಿ) (i)

4. ವಿಶ್ವದಲ್ಲಿಯೇ ಅತ್ಯಂತ ಚಿಕ್ಕ ಸಂವಿಧಾನವನ್ನು ಹೊಂದಿರುವ ದೇಶವನ್ನು ಗುರ್ತಿಸಿ

   ಎ) ಭಾರತ ಬಿ) ಅಮೇರಿಕಾ

   ಸಿ) ಇಂಗ್ಲೆಂಡ್ ಡಿ) ಕೆನಡಾ

5. ಭಾರತದಲ್ಲಿ ಎಷ್ಟು ಉಚ್ಚ ನ್ಯಾಯಾಲಯಗಳಿವೆ?

   ಎ) 51 ಬಿ) 32 ಸಿ) 40 ಡಿ) 25

II. ಕೆಳಗಿನ ಪ್ರಶ್ನೆಗಳಿಗೆ ಖಾಲಿ ಬಿಟ್ಟ ಸ್ಥಳ ಭರ್ತಿ ಮಾಡಿ: **5x1=5**

(ಡಿ ರಿಪಬ್ಲಿಕಾ, ಇಂಗ್ಲೆಂಡ್, 10, ವ್ಯಾಟಿಕನ್ ಸಿಟಿ, 30 ತಿಂಗಳು, 6)

6. _____ಇಡೀ ವಿಶ್ವದಲ್ಲಿಯೇ ಅತ್ಯಂತ ಚಿಕ್ಕ ಭೂಪ್ರದೇಶವಾಗಿದೆ
7. ಜೀನ್ ಬೋಡಿನ್ ರವರು_____ ಕೃತಿಯನ್ನು ರಚಿಸಿದರು.
8. ಅಲಿಖಿತ ಸಂವಿಧಾನಕ್ಕೆ ಒಂದು ಉತ್ತಮ ಉದಾಹರಣೆ_____
9. _____ಮೂಲಭೂತ ಹಕ್ಕುಗಳನ್ನು ಭಾರತೀಯ ಪೌರರು ಹೊಂದಿರುವರು.
10. ಗ್ರಾಮ ಪಂಚಾಯಿತಿ ಅಧ್ಯಕ್ಷರ ಅಧಿಕಾರಾವಧಿ_____

III. ಹೊಂದಿಸಿ ಬರೆಯಿರಿ: **5x1=5**

11. ಎ) ದಿ ಪ್ರಿನ್ಸ್	i) ರಾಷ್ಟ್ರಪತಿ
ಬಿ) ಸುಗ್ರೀವಾಜ್ಞೆ	ii) ತಾತ್ಕಾಲಿಕ ಸರ್ಕಾರಿ ವ್ಯವಸ್ಥೆ
ಸಿ) ಪುರಾತನ ನಿರಂಕುಶತ್ವ	iii) ಕಾರ್ಯನಿರ್ವಹಣಾಧಿಕಾರಿ
ಡಿ) ಪಿ.ಐ.ಎಲ್	iv) ಮುಖ್ಯ ಕಾರ್ಯದರ್ಶಿ
ಇ) ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ	v) ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ
	vi) ಮೆಕೆವೆಲ್ಲಿ

IV. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ: **5x1=5**

12. ಅನಮ್ಯ ಸಂವಿಧಾನ ಎಂದರೇನು ?
13. ಮುಖ್ಯಮಂತ್ರಿಯ ಅಧಿಕಾರಾವಧಿ ಎಷ್ಟು?
14. ಲೋಕಸಭೆಯ ಪ್ರಸ್ತುತ ಸಭಾಧ್ಯಕ್ಷರು ಯಾರು?
15. ಮೇಲ್ಮನವಿ ಎಂದರೇನು?
16. ಭಾರತದಲ್ಲಿ ಕೌಟುಂಬಿಕ ನ್ಯಾಯಾಲಯದ ಕಾಯ್ದೆಯು ಯಾವಾಗ ಜಾರಿಗೆ ಬಂದಿತು?

ಭಾಗ – ಬಿ

V. ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 2–3 ವಾಕ್ಯಗಳಲ್ಲಿ ಉತ್ತರಿಸಿ: **5x2=10**

17. ಯಾವುದಾದರೂ ಎರಡು ಗ್ರೀಕ್ ನಗರ ರಾಜ್ಯಗಳನ್ನು ಹೆಸರಿಸಿ.
18. ಸಮಾನತೆ ಎಂದರೇನು ?
19. ರಾಜಕೀಯ ಹಕ್ಕುಗಳು ಎಂದರೇನು?
20. ಅಧ್ಯಕ್ಷೀಯ ಸರ್ಕಾರದ ಅರ್ಥವನ್ನು ತಿಳಿಸಿ.
21. ಪ್ರಮಾಣಾನುಗುಣ ಪ್ರಾತಿನಿಧ್ಯದ ಅರ್ಥವನ್ನು ಬರೆಯಿರಿ.
22. ಜಾತ್ಯಾತೀತತೆ ಇದರ ಅರ್ಥವನ್ನು ಬರೆಯಿರಿ.
23. ನ್ಯಾಯಿಕ ವಿಮರ್ಶೆ ಎಂದರೇನು?
24. ಪಂಚಾಯತ್ ರಾಜ್ ವ್ಯವಸ್ಥೆಯು ಮೊದಲಿಗೆ ಎಲ್ಲಿ ಮತ್ತು ಯಾವಾಗ ಅನುಷ್ಠಾನಕ್ಕೆ ಬಂದಿತು?

ಭಾಗ – ಸಿ

VI. ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 15–20 ವಾಕ್ಯಗಳಲ್ಲಿ ಉತ್ತರಿಸಿ: **6x5=30**

25. ರಾಜ್ಯಶಾಸ್ತ್ರದ ವ್ಯಾಪ್ತಿಯನ್ನು ವಿವರಿಸಿ.
26. ರಾಜ್ಯ ಮತ್ತು ಸಂಘಸಂಸ್ಥೆಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.
27. ಆರ್ಥಿಕ ಹಕ್ಕುಗಳನ್ನು ವಿವರಿಸಿ.
28. ಏಕಾತ್ಮಕ ಸರ್ಕಾರದ ಲಕ್ಷಣಗಳನ್ನು ವಿವರಿಸಿ.
29. ವಿಧಾನ ಪರಿಷತ್ತಿನ ರಚನೆಯ ಕುರಿತು ಒಂದು ಟಿಪ್ಪಣಿ ಬರೆಯಿರಿ.
30. ಶಾಸನ ರಚನಾ ಪ್ರಕ್ರಿಯೆಯ ಮೂರು ವಾಚನಗಳಾವುವು? ವಿವರಿಸಿ.
31. ಲೋಕಸಭೆಯ ರಚನೆಯನ್ನು ಬರೆಯಿರಿ.
32. ಕಂದಾಯ ನ್ಯಾಯಾಲಯಗಳ ಕುರಿತು ಒಂದು ಟಿಪ್ಪಣಿಯನ್ನು ಬರೆಯಿರಿ.
33. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ದಾಖಲಿಸಲು ಕಾರಣವಾಗುವ ಐದು ಅಂಶಗಳನ್ನು ಬರೆಯಿರಿ.

ಭಾಗ – ಡಿ

VII. ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 30–40 ವಾಕ್ಯಗಳಲ್ಲಿ ಉತ್ತರಿಸಿ: **2x10=20**

34. ಸಂಯುಕ್ತ ಸರ್ಕಾರದ ಲಕ್ಷಣಗಳನ್ನು ವಿವರಿಸಿ.
35. ಭಾರತ ಸಂವಿಧಾನದ ಪ್ರಧಾನ ಲಕ್ಷಣಗಳನ್ನು ವಿವರಿಸಿ.
36. ಭಾರತದ ಪ್ರಧಾನ ಮಂತ್ರಿಯ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.
37. ಮಹಾ ನಗರ ಪಾಲಿಕೆಯ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.